# 8

# ಪರಿಚಯ

## (2 ಮತ್ತು 3 ಯೋಹಾನ)

ಹೊಸ ಒಡಂಬಡಿಕೆಗೆ ಅನುಗುಣವಾಗಿ, ಈ ಎರಡು ಪತ್ರಿಕೆಗಳಲ್ಲಿ ಪ್ರತಿಯೊಂದು ಪತ್ರಿಕೆಯು ಒಂದೊಂದು ಅಧ್ಯಾಯವನ್ನು ಹೊಂದಿರುತ್ತದೆ. ಸಾಂಪ್ರದಾಯಕ ಆರಂಭ ಹಾಗೂ ಅಂತ್ಯವನ್ನು ಹೊಂದಿದ್ದು. ಎರಡೂ ಸಹ ವಿಧವಿಧವಾದ ಸಮಸ್ಯೆಗಾಗಿ ಬರೆಯಲ್ಪಟ್ಟಿದೆ.

### ಸಾಮಾನ್ಯ ಕ್ರಮ

2 ಮತ್ತು 3ನೇ ಪತ್ರಿಕೆಗಳನ್ನು ಪ್ರೇರಿತವಾದ ವಾಕ್ಯಗಳು ಎಂದು ಒಪ್ಪಿ ಕೊಂಡಿದ್ದರೂ, ಆದಿಯಲ್ಲಿ 1 ನೇ ಪತ್ರಿಕೆಯನ್ನು ಒಪ್ಪಿಕೊಂಡ ಹಾಗೆ, ಇವುಗಳನ್ನು ಒಪ್ಪಿಕೊಂಡಿರಲಿಲ್ಲ. ಕ್ರಿ.ಶ. 325 ರಲ್ಲಿ ಈ ವಿವಾದವುಳ್ಳ ಪತ್ರಿಕೆಗಳನ್ನು ಯೂಸೆಬಿಸನು ಪರಿಶುದ್ಧ ಗ್ರಂಥಗಳ "ಸಾಲಿಗೆ ಸೇರಿಸಿದನು."[1] ಕ್ರಿ.ಶ. 367 ರಲ್ಲಿ ಅವುಗಳನ್ನು ಹೊಸ ಒಡಂಬಡಿಕೆಯ ಇಪ್ಪತ್ತ-ಏಳು ಪುಸ್ತಕಗಳಲ್ಲಿ ಸೇರಿಸಲಾಯಿತು.[2]

ಅವುಗಳಲ್ಲಿ ಅಡಗಿರುವ ವೇದ ಶಾಸ್ತ್ರದ ಕೊರತೆಯಿಂದಾಗಿ ಅವುಗಳನ್ನು ಪರಿಶುದ್ಧ ಗ್ರಂಥಗಳ ಪಟ್ಟಿಗೆ ಸೇರಿಸುವದು ತಡವಾಗಿರಬಹುದು. ಹಾಗೂ ಇದನ್ನು ನಿರ್ದಿಷ್ಟವಾದ ಕಡಿಮೆ ಜನರಿಗೆ ಬರೆದಿರುವದರಿಂದ ಇದು ತಡವಾಗಿ ಗ್ರಂಥಗಳಿಗೆ ಸೇರಿಸಿರಬಹುದು.

### ಗ್ರಂಥ ಕರ್ತೃ

2 ಮತ್ತು 3ನೇ ಯೋಹಾನ ಪತ್ರಿಕೆಗಳನ್ನು "ಒಬ್ಬ ಹಿರಿಯನು" ಬರೆದಿರುವನು ಎಂದಿದ್ದರೂ ಅವನ ನಿರ್ದಿಷ್ಟ ಹೆಸರನ್ನು ತಿಳಿಸಿರುವದಿಲ್ಲ. ಅಪೊಸ್ತಲನು ಹಿರಿಯನಾಗ ಬಹುದಾದ್ದರಿಂದ, ಪ್ರಾಯಶಃ ಯೋಹಾನನ್ನೇ ಇದನ್ನು ಬರೆದಿರಬಹುದು (ನೋಡಿರಿ 1 ಪೇತ್ರ 5:1).[3] ಅವನು ಅಧಿಕೃತ ಅಥವಾ ವಯೋವೃದ್ಧನಾಗಿದ್ದರಿಂದ ಹಿರಿಯ ಎಂದು ತಿಳಿದಿತ್ತು.

1 ಯೋಹಾನ ಪತ್ರಿಕೆಯು, ಯೋಹಾನನ ಸುವಾರ್ತೆಗೆ ಸಂಬಂಧ ಪಟ್ಟಿರುತ್ತದೆ ಯೋಹಾನನು ಈ ಪತ್ರಿಕೆಗಳಿಗೆ ನಿಕಟವಾದ ಸಂಬಂಧ ಹೊಂದಿದ್ದನು.[4] ಈ ಕುರಿತು ಜಾನ್ ರೋಪರ್‌ರವರು ಒಂದು ಸಾಕ್ಷ್ಯಾಧಾರವನ್ನು ಇಲ್ಲಿ ನೀಡಿರುವರು.

> ಯೋಹಾನ 1, 2 ಮತ್ತು 3ರನ್ನು ಹಾಗೆ ಯೋಹಾನನ ಸುವಾರ್ತೆಯನ್ನು ಒಂದೇ ವ್ಯಕ್ತಿ ಬರೆದಿರುವನು ಎಂಬುದಕ್ಕೆ ಸಾಕ್ಷ್ಯಾಧಾರದ ಸರಮಾಲೆಯೇ ಇರುತ್ತದೆ (ಹೋಲಿಸಿ ಯೋಹಾನ 1:1 ಮತ್ತು 1 ಯೋಹಾನ 1:1). ಅದೇ ವ್ಯಕ್ತಿಯು 1 ಮತ್ತು 2ನ್ನು ಬರೆದಿರುವನು. ಒಬ್ಬ ವಯೋವೃದ್ಧನಾದವನು ಬರೆದಿರುವನು. ಗ್ನಾಸ್ಟಿಕರು ಸಹ ಒಂದೇ ಭಾಷೆಯನ್ನು ಬಳಸಿರುವರು. ಮೂರನೆಯದಾಗಿ, ಇದೇ ವ್ಯಕ್ತಿಯು 2 ಮತ್ತು 3 (ಹೋಲಿಸಿ 2 ಯೋಹಾನ 1, 12 ಮತ್ತು 3 ಯೋಹಾನ 1, 13, 14)[5] ಬರೆದಿರುವನು.

### 2 ಯೋಹಾನದ ಸಾರಾಂಶ

ಇದನ್ನು ಅಮ್ಮನವರಿಗೂ, ಆಕೆಯ ಮಕ್ಕಳಿಗೂ ಬರೆಯಲ್ಪಟ್ಟಿದೆ (ವಚನ 1). ಈ ವಿಳಾಸದಲ್ಲಿ ಎರಡು ಸಂಗತಿಗಳಿವೆ. ದೇವರಾದುಕೊಂಡ ಅಮ್ಮನವರಿಗೆ ಅಂದರೆ, ಅವನು ಕ್ರೈಸ್ತ

ಮಹಿಳೆ ಹಾಗೂ ಆಕೆಯ ಮಕ್ಕಳಿಗಾಗಲೀ, ಅಥವಾ ಸ್ಥಳೀಯ ಸಭೆಗಾಗಲಿ ಬರೆದಿರುವದಿಲ್ಲ. ಯಾಕೆಂದರೆ ದೇವರಾದುಕೊಂಡವರಾದ ನಿನ್ನ ಸಹೋದರಿಯ ಮಕ್ಕಳು ಎಂದು ವಚನ 13ರಲ್ಲಿ ತಿಳಿಸಿದ್ದಾನೆ. ದೇವರಾದುಕೊಂಡ ಎಂದು ಸ್ಥಳೀಯ ಸಭೆಗೆ ಸಂಬಂಧ ಪಡಿಸಿದ್ದಾನೆ. ಯೋಹಾನನು ಒಂದೇ ವಿಧವಾದ ಇಬ್ಬರು ಸಹೋದರಿಯರನ್ನು ಹೆಸರಿಸಿರುವದು ಆಶ್ಚರ್ಯ ವಾಗಿದೆ ಸಭೆಯು ಕ್ರಿಸ್ತನ ವಧುವಾಗಿರುವದರಿಂದ (ನೋಡಿ ಎಫೆಸ 5:23). ಆರಿಸಲ್ಪಟ್ಟ ಸಭೆಯನ್ನು "ದೇವರಾದುಕೊಂಡ" ಸಭೆ ಎಂದಿರಬಹುದು.

"ದೇವರಾದುಕೊಂಡ ಸಭೆ" ಎಂಬ ಹೇಳಿಕೆಯಲ್ಲಿ ಎರಡು ಚರ್ಚೆಗಳಿವೆ:

(1) ದೇವರ ಮಕ್ಕಳನ್ನು, ಸಭೆಯ ಮಕ್ಕಳು ಎಂದು ಎಲ್ಲಿಯೂ ಹೆಸರಿಸಿರುವದಿಲ್ಲ.

(2) ಸಭಿಕರನ್ನು ಸಭೆಯ ಮಕ್ಕಳು ಎಂದರೆ, ದೇವರ ಮೊಮ್ಮಕ್ಕಳು ಎಂಬ ಅರ್ಥವಾ ಗುತ್ತದೆ, ಆದರೆ ದೇವರಿಗೆ ಮೊಮ್ಮಕ್ಕಳಿರುವದಿಲ್ಲ. ಆದಾಗ್ಯೂ ಇದು ಒಂದು ರೂಪಕಲಾಂಕರ ವಾಗಿದೆ.[6] ಇಲ್ಲಿ ಸಭಿಕರನ್ನು ಆಕೆಯ ಮಕ್ಕಳು ಎಂದು ತಿಳಿಯುವದಾದರೂ, ಅವರು ಮೊಮ್ಮಕ್ಕಳಾಗುವದಿಲ್ಲ.

ಎರಡನೇ ಯೋಹಾನ ಪತ್ರಿಕೆಯು ತಪ್ಪು ಬೋಧಕರ ಕುರಿತಾಗಿ 1 ಯೋಹಾನದಲ್ಲಿ ಬರೆ ಯಲ್ಪಟ್ಟಿದೆ: "ಮನುಷ್ಯನಾಗಿ ಬಂದಿರುವ ಯೇಸು ಕ್ರಿಸ್ತನನ್ನು ಒಪ್ಪದೆ ಇರುವ ಮೋಸಗಾರರು ಅನೇಕ ಮಂದಿ ಹೊರಟು ಲೋಕದೊಳಗೆ ಹೋಗಿದ್ದಾರೆ. ಯೇಸುವನ್ನು ಒಪ್ಪದವನು ಮೋಸ ಗಾರನೂ ಕ್ರಿಸ್ತವಿರೋಧಿಯೂ ಆಗಿದ್ದಾನೆ" (ವಚನ 7; ಹೋಲಿಸಿ 1 ಯೋಹಾನ 2:18, 22).

ಸುಳ್ಳು ಪ್ರವಾದಿಗಳೊಂದಿಗೆ, ಅವನ ಓದುಗರು ಯಾವುದೇ ವಿಧವಾದ ಸಂಬಂಧವನ್ನು ಹೊಂದಬಾರದೆಂದು ಹೇಳಲಾಗಿದೆ: "ಈ ಉಪದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ" (ವಚನ 10; ನೋಡಿರಿ ವಚನಗಳು 9-11).

## 3 ನೇ ಯೋಹಾನ ಸಾರಾಂಶ

"ಪ್ರೀತಿಸುವ ಗಾಯನಿಗೆ" ಎಂಬ ವಿಳಾಸಕ್ಕೆ ಬರೆಯಲಾಗಿದೆ (ವಚನ 1), ಅವನನ್ನು ಸೌವಾರ್ತಿಕನಾಗಿ ಮುಂದುವರೆಯಲು ಪ್ರೋತ್ಸಾಹಿಸಲಾಗಿದೆ. ಅದರಲ್ಲಿ ದೆಮಿತ್ರಿಯನು ಸೇರಿರಬಹುದು (ವಚನಗಳು 5-8, 12). ಸೌವಾರ್ತಿಕರು - ಯೋಗ್ಯತಾ ಪತ್ರವನ್ನು ಹೊಂದಿದ್ದರೂ, ದೆಮಿತ್ರಿಯನ್ನು ಅಂಥವರನ್ನು ಸೇರಿಸಿಕೊಳ್ಳಲಿಲ್ಲ, ಆದ್ದರಿಂದ ಯೋಹಾನನು ಅವರಿಗೆ ಎಚ್ಚರಿಕೆ ನೀಡಿರುವನು (ವಚನಗಳು 9, 10).

## ಮುಕ್ತಾಯ

2 ಪೇತ್ರ ಹಾಗೂ ಯೂದನ ಪುಸ್ತಕದಂತೆ, "ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವಂತೆ, ಯೋಹಾನನ ಈ ಮೂರು ಪತ್ರಿಕೆಗಳನ್ನು ಬರೆಯಲಾಗಿದೆ" (ಯೂದ 3). ಕ್ರೈಸ್ತ ನಂಬಿಕೆಯ ನಿಶ್ಚಯತ್ವನ್ನು ನೆನಪು ಮಾಡಬೇಕೆಂದು ಹಾಗೂ ನಮಗೂ ಅನ್ವಯಿಸುವಂತೆ ಬರೆಯಲಾಗಿದೆ.

ಯೋಹನನ ಈ ಮೂರು ಪತ್ರಿಕೆಗಳಲ್ಲಿ ಅಡಗಿರುವ ಒಂದೇ ಸಾರಾಂಶವನ್ನು "ಅನ್ಯೋನ್ಯತೆ" ಎಂದು ನನ್ನ ವಿದ್ಯಾರ್ಥಿಯೊಬ್ಬನು ತಿಳಿಸಿರುವನು.

1 ಯೋಹಾನ: "ನಾವು ದೇವರೊಂದಿಗೆ ಅನ್ಯೋನ್ಯತೆ ಹೊಂದುವ ಅಗತ್ಯವಿದೆ."

2 ಯೋಹಾನ: "ಸುಳ್ಳನೊಂದಿಗೆ ಅನ್ಯೋನ್ಯತೆ ಹೊಂದಿರಬಾರದು."

3 ಯೋಹಾನ: "ದೇವರ ಭಕ್ತರೊಂದಿಗೆ ಅನ್ಯೋನ್ಯತೆ ಹೊಂದಿರಬೇಕು."

**ಟಿಪ್ಪಣಿಗಳು**

[1]Eusebius *Ecclesiastical History* 3.25. [2]F. F. Bruce, *The Epistles of John: Introduction, Exposition and Notes* (N.p.: Pickering & Inglis, 1970; reprint, Grand Rapids, Mich.: Wm. B. Eerdmans Publishing Co., 1986), 20. [3]ಬರಹಗಾರನು ಸಹ ಒಬ್ಬ ಹಿರಿಯನಿರಬಹುದು. ಫಿಲಿಪ್ಪಿಯವರಿಗೆ 1:1 ("ಮೇಲ್ವಿಚಾರಣೆಕನು"). [4]2 ಮತ್ತು 3 ಯೋಹಾನ, 1 ನೇ ಯೋಹಾನನ ಪತ್ರಿಕೆಗೆ ಸಂಬಂಧಪಟ್ಟಿರುತ್ತದೆ. (D. A. Carson, Douglas J. Moo, and Leon Morris, *An Introduction to the New Testament* [Grand Rapids, Mich.: Zondervan, 1992], 449); ಯೋಹಾನನ ಸುವಾರ್ತೆಯ ಪ್ರಕಾರ (Allen Black, *An Outline of New Testament Introduction* [Memphis, Tenn.: Harding University Graduate School of Religion, 1994], 45). [5]David Roper, "2 & 3 John: Do's and Don'ts of Christian Hospitality," in "A Survery of the New Testament," *Truth for Today* 14 (July 1993): 47. [6]ಉದಾಹರಣೆಯಾಗಿ ಹೇಳುವುದಾದರೆ "ಸಭೆಯು ಕ್ರಿಸ್ತನ ಶರೀರವಾಗಿದೆ" ಎಂಬ ರೂಪಕಾಂಲಕಾರವನ್ನು ಅನಿಶ್ಚಿತವಾಗಿ ಬಳಸಲಾಗಿದೆ. ಹಲವು ವಿಧಾನದಲ್ಲಿ ಸಭೆಯು ಮನವನ ಶರೀರದಂದದ್ದು-ಆದರೆ ಎಲ್ಲದರಲ್ಲೂ ಅಲ್ಲ.